ಜಮೀನುಗಳ ಪಹಣಿ (ಉತಾರ) ಮತ್ತು ಡಾಕ್ಯುಮೆಂಟ್ ಶೀಟುಗಳ ಹಂಚಿಕೆ

130 (630) : Sri Siddu Savadhi (Jamakhandi) : Will the Minster for Revenue be pleased to state :

1) In which stage is the project of issue of computerized RTCs at Hobli or Gram panchayat level and when will it be started.

2) In which villages of Jamakhandi taluk the project is proposed to be started.

3) When will the project of issue of document sheets in hobli level start.

4) Has it come to the notice of Government that farmers are standing in Que for the whole day facing problems to get the RTCs and document sheets.

5) If so, what is the action taken.

Sri Jagadish Shetter (Minister for Revenue) :

1) The project on issuing of computerized RTCs at hobli level will be started in a phased manner. This project would entirely cover all the hoblis of the State 6 months time form the date of start of the project.

2) This project would be started at all hoblis of Jamkhandi taluk.

3) State Bank of Mysore, State Bank of India, State Bank of Hyderabad and Corporation Banks are issuing document sheets in 308 branches all over the State. Some of the branches are there in hobli level also.

Issue of document sheets in a phased manner in 200 additional branches is being planned. After completion of this work, if there are branches of the above Banks in hoblies, those hoblis would also issue the document sheets.

4) **Pahani** Yes **Document Sheet.**

It has been noticed that there are problems in those places where there are no Bank branches or in places where there is a Bank but document sheets are not being issued.

5) **Pahani**

This problem of issue of RTC would be solved once the scheme is decentralized to hobli level on a PPP model.

Document sheet

Discussions have been held with the Banks. They have agreed to issue document sheets from their branches as early as possible.

ಶ್ರೀ ಸಿದ್ದುಸಾವದಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಪಹಣಿ ಮತ್ತು ಡಾಕ್ಯುಮೆಂಟ್ ಶೀಟ್‌ಗಳನ್ನು ಪಡೆಯಲು ಪ್ರತಿದಿವಸ ರೈತರು ತಹಶೀಲ್ದಾರ್ ಕಛೇರಿ ಹಾಗೂ ಬ್ಯಾಂಕ್‌ಗಳ ಮುಂದೆ ನಿಂತು ಕ್ಯೂನಲ್ಲಿ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹಳ ದಿವಸಗಳಿಂದ, ಹೋಬಳಿ ಮಟ್ಟದಲ್ಲಿ ಕೇಂದ್ರಗಳನ್ನು ತೆರೆದು ಪಹಣಿ ವಿತರಣೆ ಮಾಡಬೇಕೆಂದು ನಾವು ಹೇಳುತ್ತಾ ಬಂದಿದ್ದೇವೆ, ಅದು ಇದುವರೆಗೆ ಆಗಿಲ್ಲ, ಅದೇ ರೀತಿಯಾಗಿ, ಈ ನಾಲ್ಕಾರು ಬ್ಯಾಂಕ್‌ಗಳಿಂದ ಡಾಕ್ಯುಮೆಂಟ್ ಶೀಟ್‌ಗಳನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ, ಅದೂ ಕೂಡ ಆಗಿಲ್ಲ, ಬಹಳಷ್ಟು ರೈತರು ಹಳ್ಳಿಗಳಿಂದ ಆ ಡಾಕ್ಯುಮೆಂಟ್ ಶೀಟ್ ಸಲುವಾಗಿ ಕ್ಯೂನಲ್ಲಿ ನಿಂತು ಕೊನೆಗೆ ಸಿಗದೆ ನಿರಾಶರಾಗಿ ಆ ಖರೀದಿಯನ್ನೇ ಬಿಟ್ಟು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಅದನ್ನು ಯಾವಾಗ ಮಾಡುತ್ತೀರೆನ್ನುವ ನಿರ್ದಿಷ್ಟವಾದ ಉತ್ತರವನ್ನು ತಮ್ಮ ಮುಖಾಂತರ ಸರ್ಕಾರದ ಕಡೆಯಿಂದ ನಾನು ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಗಣಕೀಕೃತ ಕಿಯಾಸ್ಕ್‌ಗಳನ್ನು ಈಗಾಗಲೇ 175 ತಾಲ್ಲೂಕು ಕೇಂದ್ರಗಳಲ್ಲಿ ದಾಖಲೆಗಳನ್ನು ವಿತರಣೆ ಮಾಡುವ ಕಾರ್ಯಕ್ರಮ "ಭೂಮಿ" ಯೋಜನೆಯಡಿಯಲ್ಲಿ ನಡೆಯುತ್ತಿದೆ. ಎರಡು ದಿವಸಗಳ ಹಿಂದೆ ಪತ್ರಿಕೆಗಳಲ್ಲೂ ಬಂದಿದೆ, ಈ ಒಂದು "ಭೂಮಿ" ಯೋಜನೆಯನ್ನು ರಾಜ್ಯ ಸರ್ಕಾರ ಕಂದಾಯ ಇಲಾಖೆಯಡಿಯಲ್ಲೇನು ಮಾಡುತ್ತಿದೆ, ಇದೊಂದು ಉತ್ತಮವಾದ ಯೋಜನೆ ಎಂದು ಯುನೈಟೆಡ್ ನೇಷನ್‌ನಿಂದ ಒಂದು ಅವಾರ್ಡ್ ಕೂಡ ಬಂದಿದ್ದು, ಅದೊಂದು ನಮ್ಮ ಕರ್ನಾಟಕ ರಾಜ್ಯಕ್ಕೆ ಸಂದ ಗೌರವವೆಂದು ನಾನು ಹೇಳಬಯಸುತ್ತೇನೆ. ಈಗಾಗಲೇ 175 ಕೇಂದ್ರಗಳಲ್ಲಿ ಗಣಕೀಕೃತ ಕಿಯಾಸ್ಕ್‌ಗಳನ್ನು ಏನು ನಾವು ಮಾಡಿದ್ದೇವೆ, ಇದನ್ನು ಇನ್ನೂ 800 ಹೋಬಳಿ ಕೇಂದ್ರಗಳಿಗೆ ವಿಸ್ತರಣೆ ಮಾಡಬೇಕೆನ್ನುವ ನಿರ್ಣಯವನ್ನು ನಾವು ಕೈಗೊಂಡಿದ್ದೇವೆ, ಇನ್ನು 6 ತಿಂಗಳಲ್ಲಿ ಪ್ರತಿಯೊಂದು ಹೋಬಳಿ ಕೇಂದ್ರದಲ್ಲಿ, ಏನೊಂದು ಇವತ್ತು ತಾಲ್ಲೂಕು ಕೇಂದ್ರಗಳಲ್ಲಿ ಈ ಗಣಕೀಕೃತ ಕೇಂದ್ರಗಳ ಮೂಲಕ ಭೂಮಿಯ ದಾಖಲೆಗಳನ್ನು ಕೊಡುವ ವ್ಯವಸ್ಥೆ ಇದೆ, ಇದನ್ನು 800 ಕೇಂದ್ರಗಳಲ್ಲಿ ವಿಸ್ತರಣೆ ಮಾಡುವುದಕ್ಕೆ ಈಗಾಗಲೇ ಪ್ರೋಸೆಸ್ ಪ್ರಾರಂಭವಾಗಿದೆ, ಇನ್ನು 6 ತಿಂಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗುವುದೆಂಬ ಅಂಶವನ್ನು ನಾನು ಸ್ಪಷ್ಟವಾಗಿ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಎಂದಿನಿಂದ ಪ್ರಾರಂಭಿಸಲಾಗುವುದೆಂದು ಕೇಳಿದ್ದಾರೆ.

ಡಾಕ್ಯುಮೆಂಟ್ ಕಾಗದಗಳು ಹಾಗೂ ಬಾಮಡ್ ಪೇಪರ್‌ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೆಲವೇ ಬ್ರಾಂಚ್‌ಗಳಲ್ಲಿ ಕೊಡುವ ವ್ಯವಸ್ಥೆ ಇದೆ, ಈ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ, ಇನ್ನೂ ಹೆಚ್ಚಿನ ಬ್ರಾಂಚ್‌ಗಳಲ್ಲಿ ಇದನ್ನು ವಿಸ್ತರಣೆ ಮಾಡಬೇಕೆನ್ನುವ ಬೇಡಿಕೆ ಬರುತ್ತಿದೆ. ಈಗ ಈ ಎರಡು ಬ್ಯಾಂಕ್‌ಗಳ 308 ಶಾಖೆಗಳಲ್ಲಿ ಬಾಂಡ್ ಪೇಪರ್‌ಗಳನ್ನು ಕೊಡುವ ವ್ಯವಸ್ಥೆ ಇದೆ. ಇದು ಸಾಲುತ್ತಿಲ್ಲ. ಇನ್ನೂ ಹೆಚ್ಚಿನ ಬ್ರಾಂಚ್‌ಗಳಿಗೆ ಇದನ್ನು ವಿಸ್ತರಣೆ ಮಾಡಬೇಕೆನ್ನುವ ನಿರ್ಣಯವನ್ನು ಕೈಗೊಂಡಿದ್ದೇವೆ. ಇನ್ನೂ ಈ ಬ್ಯಾಂಕುಗಳ 200 ಶಾಖೆಗಳಲ್ಲಿ ಹೆಚ್ಚಿನ ಸೌಲಭ್ಯವನ್ನು ಕೊಡುವಂಥದ್ದನ್ನು ಆದಷ್ಟು ಬೇಗನೆ ಒಂದೆರಡು ತಿಂಗಳುಗಳಲ್ಲಿ ವ್ಯವಸ್ಥೆ ಮಾಡುತ್ತೇವೆಂದು ನಾನು ಸ್ಪಷ್ಟವಾಗಿ ಭರವಸೆ ಕೊಡುತ್ತೇನೆ. ಈ ರೀತಿಯ ವ್ಯವಸ್ಥೆ ಬಂದ ಮೇಲೆ ಕೆಲವು ತಾಲ್ಲೂಕು ಕೇಂದ್ರಗಳಲ್ಲಿ ಬೆಳೆ ವಿಮೆ ತುಂಬುವಂತಹ ಸಂದರ್ಭದಲ್ಲಿ ಕೆಲವೊಂದು ಸಲ ಈ ಪಹಣಿ ಪತ್ರಗಳನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಹೆಚ್ಚಿನ ಕ್ಯೂ ಇರುವುದು ನೋಡುತ್ತಿದ್ದೇವೆ. ಆದರೆ ಬಹಳಷ್ಟು ಕಡೆ ಈ ವ್ಯವಸ್ಥೆ ಬಹಳ ಸುಗಮವಾಗಿ ನಡೆದಿದೆ. ರೈತರಿಗೆ ಕೇವಲ 5–10 ನಿಮಿಷಗಳಲ್ಲಿ ಪಹಣಿ ಪತ್ರಗಳನ್ನು ಕೊಡುವಂತಹ ವ್ಯವಸ್ಥೆ ಈಗಾಗಲೇ ಬಂದಿದೆ. ಕೆಲವೊಂದು ತಾಲ್ಲೂಕುಗಳಲ್ಲಿ ಎಲ್ಲಿ ತೊಂದರೆ ಇದೆ, ಅಲ್ಲಿ ಹೆಚ್ಚು ಹೋಬಳಿ ಕೇಂದ್ರಗಳಲ್ಲಿ ವಿಸ್ತರಣೆ ಮಾಡುವ ಬಗ್ಗೆ ನಾವು ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ, ಕೆಲವು ತಾಲ್ಲೂಕುಗಳಲ್ಲಿ ಸಾಫ್ಟ್‌ವೇರ್‌ಗಳು ಎಕ್ಸಾಸ್ಟ್ ಆಗಿವೆ. ಅದನ್ನು ರಿಪ್ಲೇಸ್ ಮಾಡುವುದಕ್ಕೆ ತಿಂಗಳುಗಟ್ಟಲೆ ತೆಗೆದುಕೊಳ್ಳುತ್ತಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ ಕೆಲಸ ನಿಷ್ಕ್ರಿಯ ಆಗಿ ಹೋಗಿದೆ. ತುಮಕೂರು ಜಿಲ್ಲೆಯ ಐದು ಅಥವಾ ಆರು ತಾಲ್ಲೂಕುಗಳಲ್ಲಿ ಸಾಫ್ಟ್‌ವೇರ್ ಫುಲ್ ಆಗಿ ಬಿಟ್ಟಿದೆ. ಹೊಸ ಸಾಫ್ಟ್‌ವೇರ್‌ನ್ನು ರಿಪ್ಲೇಸ್ ಮಾಡಿಲ್ಲವೆನ್ನುವ ಒಂದು ಕಾರಣಕ್ಕಾಗಿ ಒಂದೂವರೆ – ಎರಡು ತಿಂಗಳುಗಳಿಂದ ರೈತರಿಗೆ ಆಗಲಿ, ಯಾರಿಗೇ ಆಗಲಿ ಒಂದೇ ಒಂದು ಡಾಕ್ಯುಮೆಂಟ್ ಸಿಗುತ್ತಿಲ್ಲ. ಪಹಣಿಯೂ ಸಿಗುತ್ತಿಲ್ಲ. ನಾನು ಡಿಸಿಯವರ ಜೊತೆ ಎರಡು – ಮೂರು ಸಾರಿ ಮಾತನಾಡಿದ್ದೇನೆ. ಹಂತ ಹಂತವಾಗಿ ಮಾಡುತ್ತೇವೆಂದು ಹೇಳಿ ತಿಂಗಳುಗಟ್ಟಲೆ ತಡ ಮಾಡಿದಿರಿ. ಇದನ್ನು ಮ್ಯಾನ್ಯುಯಲ್ ಆಗಿ ಮಾಡುವ ಆಗಿಲ್ಲ. ನಿಮ್ಮ ಕಂಪ್ಯೂಟರ್ ಸಾಫ್ಟ್‌ವೇರ್ ಫುಲ್ ಆಗಿದೆ ಎಂದರೆ ಇನ್ನು ಮುಂದೆ ಭೂಮಿ ಮೇಲೆ ಯಾವುದೇ ರೆಕಾರ್ಡ್ ತೆಗೆದುಕೊಳ್ಳದೆ ಇರುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರೋ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಬಹಳಷ್ಟು ತಾಲ್ಲೂಕುಗಳಲ್ಲಿ ಈ ವ್ಯವಸ್ಥೆ ಸುಗಮವಾಗಿ ನಡೆಯುತ್ತಿದೆ. ಮಾನ್ಯ ಸದಸ್ಯರು ತುಮಕೂರು ಜಿಲ್ಲೆಯ ಉದಾಹರಣೆ ಕೊಟ್ಟರು, ಈ ರೀತಿ ಕಂಪ್ಲೇಂಟ್ಸ್ ಬಂದಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದ ಅಧಿಕಾರಿಗಳು ತಕ್ಷಣವೇ ಹಾಜರಾಗಿ ಅದನ್ನು ಸರಿಪಡಿಸಿದ್ದಾರೆ. ಮತ್ತು ಅವುಗಳನ್ನು ರಿಪೇರಿ ಮಾಡುವಂತಹ ಕೆಲಸವನ್ನು

ಮಾಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಮಾಧುಸ್ವಾಮಿಯವರು ತುಮಕೂರು ಜಿಲ್ಲೆಯ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ, ಅಲ್ಲಿಯ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಆದಷ್ಟು ಬೇಗನೆ ಅದನ್ನು ರಿಪೇರಿ ಮಾಡುವಂಥದ್ದು, ಮತ್ತು ಅದನ್ನು ಸುಗಮಗೊಳಿಸುವಂತಹ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಹೋಬಳಿ ಕೇಂದ್ರಕ್ಕೆ ಒಂದೊಂದು ಕಿಯೋಸ್ಕ್ ಮಂಜೂರು ಮಾಡುತ್ತೇವೆಂದು ಹೇಳಿದಿರಿ. ನಮಗೆ ಗೊತ್ತಿರುವ ಪ್ರಕಾರ ದಕ್ಷಿಣ ಕರ್ನಾಟಕದಲ್ಲಿ ಹೋಬಳಿ ಕೇಂದ್ರಗಳು ಬಹಳ ಇವೆ. ಉತ್ತರ ಕರ್ನಾಟಕದಲ್ಲಿ ಹೋಬಳಿ ಕೇಂದ್ರ ಬಹಳ ಕಡಿಮೆ. ಅದೇನು ಅಡ್ಮಿನಿಸ್ಟೇಟಿವ್ ಯೂನಿಟ್ಟೂ ಅಲ್ಲ. ಅಲ್ಲಿ ಏಕೆ ಇಂತಹ ಕೇಂದ್ರಗಳನ್ನು ಮಾಡಬೇಕೆಂದು ಹೇಳುತ್ತೀರಿ? ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಆದರೂ ಮಾಡಿ. ಇಲ್ಲ ಐದು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂತಹ ದೊಡ್ಡ ದೊಡ್ಡ ಹಳ್ಳಿಗಳು ಏನಿವೆ, ಆ ಎಲ್ಲಾ ಹಳ್ಳಿಗಳಿಗೆ ಕೊಟ್ಟರೆ ಈ ತಾರತಮ್ಯ ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ಹೋಬಳಿ ಕೇಂದ್ರಕ್ಕೆ ಒಂದರಂತೆ ಹೇಳಿದರೆ ಇಲ್ಲಿ ಹೆಚ್ಚಿಗೆ ಆಗುತ್ತವೆ, ನಮ್ಮ ಕಡೆ ಕಡಿಮೆ ಆಗುತ್ತವೆ. ಅದರಿಂದ ನಮ್ಮ ಜನರಿಗೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವೇನು ಗೈಡ್‌ಲೈನ್ಸ್ ಹಾಕಿಕೊಂಡಿದ್ದೇವೆ, ಹೋಬಳಿ ಕೇಂದ್ರಕ್ಕೆ ಇದನ್ನು ವಿಸ್ತರಿಸುವಂಥದ್ದು, ಆ ನಿಯಮವನ್ನು ಅಷ್ಟಕ್ಕೇ ನಾವು ರಿಸ್ಟ್ರಿಕ್ಷನ್ ಹಾಕಿಕೊಂಡಿಲ್ಲ. ನಾಳೆ ಎಲ್ಲೆಲ್ಲಿ ಅವಶ್ಯಕತೆ ಇದೆ, ನಾಳೆ ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಪ್ರಕಾರ ಎಲ್ಲೊ ಒಂದು ದೊಡ್ಡ ಗ್ರಾಮ ಇದೆ, ಆ ಅಕ್ಕಪಕ್ಕದ ಗ್ರಾಮಗಳಿಗೆ ಆ ಗ್ರಾಮಕ್ಕೆ ಹೋದರೆ ಅನುಕೂಲವಾಗುತ್ತದೆ ಎನ್ನುವಂಥದ್ದು ಮಾಹಿತಿ ತೆಗೆದುಕೊಂಡು ಬೇರೆ ಬೇರೆ ದೊಡ್ಡ ಗ್ರಾಮಗಳಿಗೂ ಅದನ್ನು ವಿಸ್ತರಣೆ ಮಾಡುವಂಥ ಆಲೋಚನೆ ಕೂಡ ಇದೆ. ಕೇವಲ 800 ಹೋಬಳಿ ಕೇಂದ್ರಗಳನ್ನೆಷ್ಟೇ ರಿಸ್ಟ್ರಿಕ್ಷನ್ ಮಾಡಿಕೊಂಡಿಲ್ಲ. ಕೇವಲ ಹೋಬಳಿ ಎನ್ನುವುದೂ ರಿಸ್ಟ್ರಿಕ್ಷನ್ ಮಾಡಿಕೊಂಡಿಲ್ಲ. ಹಾಗಾಗಿ ಇದನ್ನು ಮತ್ತೆ ವಿಸ್ತರಿಸಿ ಮಾಡುವುದಕ್ಕೂ ನಾವು ನಿಯಮವನ್ನು ಸಡಿಲಗೊಳಿಸುತ್ತೇವೆ. ಆ ಹೋಬಳಿ ಕೇಂದ್ರಗಳಲ್ಲಿಯೂ ಕೂಡ ನಾವು ಮಾಡುತ್ತೇವೆ.

ಗೋಮಾಳಗಳ ಸಾಗುವಳಿಯನ್ನು ಸಕ್ರಮಗೊಳಿಸಲು ಸಾಧ್ಯವಾಗದಿರುವುದು

131 (525): ಶ್ರೀ ಕುಮಾರ್ ಬಂಗಾರಪ್ಪ. ಎಸ್. (ಸೊರಬ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಆದೇಶದಿಂದಾಗಿ ಗೋಮಾಳಗಳ ಸಾಗುವಳಿಯನ್ನು ಸಕ್ರಮಗೊಳಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;